



ಅರುಣ ಪಿ. ಭಟ್ಟ

# ವಾರಭವಿಷ್ಯ: 05.01.2023ದಿಂದ 11.01.2023ರವರೆಗೆ



**ಮೇಷ**

ಆರಂಭದ ಎರಡು ದಿನದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸ. ಮನೆ ಬಾಡಿಗೆಯಿಂದ ಧನಲಾಭ. ರಾಜಕೀಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಭದ್ರಗೊಳ್ಳುವ ಸಾಧ್ಯತೆಯಿದೆ. ಗ್ರಂಥ ರಚನೆಯಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ ಆಗುತ್ತದೆ. ನಿಮಗೆ ಬರತಕ್ಕ ಬಾಕಿ ಬರುವುದು. ಶುಭದಿನ 06. ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.



**ವೃಷಭ**

ವಾರದ ಪ್ರಾರಂಭದಲ್ಲಿ ಸುಖವಾಗಿ ಪ್ರವಾಸ ಮುಗಿಸಿ ಗೃಹಾಗಮನ. ಸಹೋದರಿಯರಿಂದ ಶುಭವಾರ್ತೆ ಸಿಗಲಿದೆ. ಹಸ್ತಾಲಂಕಾರ ವಸ್ತು ಖರಿದಿ ಮಾಡುವ ಸಾಧ್ಯತೆ. ವಾರದ ಮಧ್ಯದಲ್ಲಿ ಜ್ವರ ಪೀಡೆ ವೈದ್ಯಕೀಯ ಖರ್ಚು. ಕೋರ್ಟ್ ಪ್ರಕರಣದಲ್ಲಿ ಗೆಲುವು ನಿಮ್ಮ ಪಾಲಿಗೆ ಒಲಿಯಲಿದೆ. ಅವಮಾನಕರ ಪ್ರಸಂಗ ಎದುರಾಗಬಹುದು. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ಶುಭದಿನ 07. ಈಶ್ವರನಿಗೆ ತಿಲಾರ್ಚನೆ ಮಾಡಿರಿ.



**ಮಿಥುನ**

ದೈಹಿಕ ಜಾಡ್ಯ ಅಲರ್ಜಿ ಹೆಚ್ಚಾಗುವ ಸಾಧ್ಯತೆ ಇದೆ. ವಿನಾಕಾರಣ ಹೆದರಿಕೆ ಉಂಟಾಗುತ್ತದೆ. ಆದರೆ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ ಏರ್ಪಡಿಸಲಿದ್ದೀರಿ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ವಾಗ್ಝರಿ ಪ್ರದರ್ಶನ. ಮಾನ ಸನ್ಮಾನಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಶುಭದಿನ 08. ಕಾರ್ತಿಕೇಯ ಸ್ತೋತ್ರ ಪಠಣ ಮಾಡಿರಿ.



**ಕಟಕ**

ವಾರದ ಪ್ರಾರಂಭದಲ್ಲಿ ನಿಮಗೆ ಎದುರಾಗಿದ್ದ ಸಮಸ್ಯೆಗಳು ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಜಾಗ್ರತೆ. ವಾರವಿಡೀ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಕಾಲಿನ ನೋವು ದೀರ್ಘಕಾಲ ಕಾಡಬಹುದು. ಈ ವಾರ ಅಧಿಕ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು ಸಿಗಲಿದೆ. ಶುಭದಿನ 09. ಗುರುದತ್ತಾತ್ರೇಯ ಆರಾಧನೆ ಮಾಡಿರಿ.



**ಸಿಂಹ**

ವಾರದ ಆರಂಭಕ್ಕೆ ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವುದು. ಪರಿಚಿತ ಸ್ತ್ರೀ ವಿರೋಧವನ್ನು ಎದುರಿಸಬೇಕಾಗುತ್ತದೆ. ಪಶುಗಳ ವ್ಯಾಪಾರಸ್ಥರಿಗೆ ಲಾಭ ಸಿಗಲಿದೆ. ಹೊಟ್ಟೆನೋವಿನ ಪ್ರಸಂಗ ಕಿರಿಕಿರಿ ಉಂಟು ಮಾಡುತ್ತದೆ. ಅಜ್ಞಾತವಾಸದಿಂದ ಬಿಡುಗಡೆ. ಮಹತ್ವದ ಮಾತುಕತೆ. ಶುಭದಿನ 08. ಹನುಮಾನ್ ಚಾಲೀಸ್ ಪಠಿಸಿರಿ.



**ಕನ್ಯಾ**

ಅನಿರೀಕ್ಷಿತ ಖರ್ಚಿನ ಪ್ರಸಂಗ ನಿಮ್ಮನ್ನು ಚಿಂತೆಗೆ ಗುರಿ ಮಾಡುತ್ತದೆ. ಸರಕಾರಿ ಕೆಲಸದಲ್ಲಿ ವ್ಯತ್ಯಯ ಆಗಬಹುದು. ಸೇವಕರಿಂದ ಹಾನಿ, ತೊಂದರೆ. ಬಂಧುಗಳಿಗೆ ಆಪತ್ತು. ಮನೆಗೆಲಸವನ್ನು ಅರ್ಧಕ್ಕೆ ನಿಲ್ಲಿಸಲು ಮುಂದಾಗುತ್ತೀರಿ. ಪ್ರೇಮ ಪ್ರಸಂಗಗಳಲ್ಲಿ ಭಗ್ನತೆ ಉಂಟಾಗುತ್ತದೆ. ಅಧಿಕಾರಿಗಳಿಗೆ ಹಿನ್ನಡೆ ಆಗುತ್ತದೆ. ಶುಭದಿನ 06. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.



**ತುಲಾ**

ಈ ವಾರದಲ್ಲಿಯೇ ಉತ್ತಮ ಫಲ ಪ್ರಾಪ್ತಿಯಾಗುತ್ತದೆ. ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಭರವಸೆ ಸಿಗಲಿದೆ. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ ದೊರಕಬಹುದು. ವಿವಾಹ ಅಪೇಕ್ಷೆ ಇರುವವರಿಗೆ ಸಂಗಾತಿ ಲಭ್ಯ. ಮನೆಗೆಲಸಕ್ಕೆ ಹೊಸ ಸೇವಕರು ಸಿಗುವರು. ವ್ಯಾಪಾರದಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ 10. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.



**ವೃಶ್ಚಿಕ**

ಕಷ್ಟದಲ್ಲೂ ಇಷ್ಟದ ಫಲ ಪ್ರಾಪ್ತಿಯಾಗುವುದು. ಇದರಿಂದ ಖುಷಿ ಉಂಟಾಗಲಿದೆ. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆಯ ಸಂಭವ ಇದೆ. ಕುಟುಂಬ ವರ್ಗದಲ್ಲಿ ಅನಾರೋಗ್ಯ ಕಾಡುವ ಅಪಾಯ ಇದೆ. ಪ್ರಾಣಾಪಾಯ ಭೀತಿಯಿಂದ ಪಾರಾಗುತ್ತೀರಿ. ಶುಭದಿನ 09. ದುರ್ಗಾ ಆರಾಧನೆ ಮಾಡಿರಿ.



**ಧನಸ್ಸು**

ಆರೋಗ್ಯದಲ್ಲಿ ಏರುಪೇರು ಆಗುವುದರಿಂದ ಚಿಂತೆ ಮಾಡುತ್ತೀರಿ. ಹೆಂಡತಿಯೊಡನೆ ಜಗಳ ಆಗುತ್ತದೆ. ಕಚೇರಿ ಕಾಗದ ಪತ್ರಗಳು ಹಠಾತ್ ಕಾಣೆಯಾಗುವಿಕೆ. ದೂರದಿಂದ ಅಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗವಾಗಿ ನೆರವೇರುತ್ತವೆ. ಹಿರಿಯ ಅಧಿಕಾರಿಗಳ ದಿಢೀರ್ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ದೇವತಾ ಪೂಜೆ ನಡೆಯುವುದು. ಶುಭದಿನ 08. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಮಕರ**

ಅಕಸ್ಮಾತ್ ಪೂರ್ವದಿಕ್ಕಿನಲ್ಲಿ ಸಾಗಿದಲ್ಲಿ ಅಪಘಾತ ಭಯ ಕಾಡಬಹುದು. ಕಾಲು ನೋವಿನ ಸಮಸ್ಯೆಯಿಂದ ಬಳಲುತ್ತೀರಿ. ಕುಟುಂಬ ನಿರ್ವಹಣೆಯ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನ ಆಗಲಿದೆ. ಮಕ್ಕಳಿಂದ ಶುಭವಾರ್ತೆ. ದಾಂಪತ್ಯ ಜೀವನದಲ್ಲಿ ಸೌಖ್ಯ. ಹಣಕಾಸಿನ ಕೊರತೆ ಉಂಟಾಗುವ ಸಾಧ್ಯತೆ ಇದೆ. ಶುಭದಿನ 07. ನವಗ್ರಹ ಸ್ತೋತ್ರ ಮಾಡಿರಿ.



**ಕುಂಭ**

ಪ್ರಾರಂಭದಿಂದಲೂ ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಇಲಾಖೆಯಲ್ಲಿ ಕೆಲಸದಲ್ಲಿರುವವರಿಗೆ ತಾತ್ಕಾಲಿಕ ಬಡ್ತಿ ಸಿಗುವ ಯೋಗ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನಿರೀಕ್ಷೆಗಿಂತ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭವನ್ನು ಕಾಣುವಿರಿ. ಮಿತ್ರರಿಂದ ವಂಚನೆಯಾಗುವ ಸಂಭವ ಇದೆ. ಶುಭದಿನ 06. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.



**ಮೀನ**

ವಿನಾಕಾರಣ ಮಿತ್ರರು ಶತ್ರುಗಳಾಗಿ ಉಲ್ಟಾ ಹೊಡೆಯಲಿದ್ದಾರೆ. ಮೇಲಧಿಕಾರಿಗಳಿಂದ ಭಯದ ನೋಟಿಸ್ ಬರಬಹುದು. ಕಲಾವಿದರಿಗೆ ಸಂಗೀತಗಾರರಿಗೆ ವಾರದ ಮೊದಲಾರ್ಧ ಉತ್ತಮ. ಸೊಂಟನೋವು ಕಾಣಿಸುವುದು. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕೆಟ್ಟ ಜನರಿಂದ ಧನಪ್ರಾಪ್ತಿ. ಶುಭದಿನ 09. ಆದಿತ್ಯ ಹೃದಯ ಪಠಿಸಿರಿ.